ಆಪಾದನೆಗಳಾಗುತ್ತದೆ ಯಾರಾದರೂ ಕೂಡ ವಿದ್ಯಾರ್ಥಿಗಳಾದಂತಹವರು ಎಲ್ಲಿ ಇಂಥ ಅವ್ಯವಹಾರಗಳಾಗಿರುತ್ತವೆ ಅಲ್ಲಿ ಅವರ ಜಾತಿ, ತತ್ವ, ನಂಬಿಕೆಗಳನ್ನು ಮುಂದಿಟ್ಟುಕೊಳ್ಳದೇ ಆ ಅವ್ಯವಹಾರಗಳ ವಿರುದ್ಧ ನಿಷ್ಪಕ್ಷಪಾತವಾಗಿ ಎಲ್ಲರ ವಿರುದ್ಧವೂ ಕ್ರಮ ಜರುಗಿಸಬೇಕೆಂಬ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮಾತನ್ನು ಒಪ್ಪುತ್ತೇನೆ ಆದರೆ, ಇದು ಕೇವಲ ಏ ಬಿ ವಿ ಪಿ ಗೆ ಮಾತ್ರ ಸೀಮಿತವಾಗಿಲ್ಲ ಅದು ಎಲ್ಲಾ ಪಕ್ಷಗಳ frontal organization ಗೂ ಸೀಮಿತವಾಗುತ್ತದೆ

(ಗೊಂದಲ)

ಅಧ್ಯಕ್ಷರು – ದಯಮಾಡಿ ಎಲ್ಲರೂ ಸಹಕರಿಸಬೇಕು

ಶ್ರೀ ಸಿ ಟಿ ರವಿ – ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಕೇಳಿದಾಗ ನಾಳೆ ಅವಕಾಶ ಕೊಡುತ್ತೇನೆಂದು ಹೇಳಿದ್ದಿರಿ

ಅಧ್ಯಕ್ಷರು – ಈಗ ಬಜೆಟ್ ಮೇಲೆ ಚರ್ಚೆ ಆರಂಭವಾಗಲಿ ನಾಳೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ ದಯಮಾಡಿ ನೀವು ಕುಳಿತುಕೊಳ್ಳಿ

(ಈ) ಅರಸೀಕೆರೆ ತಾಲ್ಲೂಕಿನಲ್ಲಿ ಮಾಲೇಕಲ್ ತಿರುಪತಿಯಲ್ಲಿ ಆದ ಕೊಲೆಯ ಬಗ್ಗೆ

ಶ್ರೀ ಎ ಎಸ್ ಬಸವರಾಜ್ (ಅರಸೀಕೆರೆ) – ಮಾನ್ಯ ಅಧ್ಯಕ್ಷರೆ, ಅರಸೀಕೆರೆ ತಾಲ್ಲೂಕಿನಲ್ಲಿ ಸುಮಾರು 2 ಕಿಲೋಮೀಟರ್ ಹತ್ತಿರದಲ್ಲಿ ಮಾಲೇಕಲ್ ತಿರುಪತಿ ಇದೆ ಅಲ್ಲಿ ಶನಿವಾರದ ದಿವಸ ಬೆಳಗಿನಜಾವ ಕಗ್ಗೊಲೆಯಾಗಿದೆ ಹುಂಡಿಯನ್ನು ಒಡೆಯಲು ಬಂದಿರತಕ್ಕ ವ್ಯಕ್ತಿಗಳು ಬೈರಪ್ಪ ಮತ್ತು ಗಂಗಣ್ಣ ಎಂಬುವರಿಬ್ಬರನ್ನೂ ಕೊಲೆ ಮಾಡಿ ಹುಂಡಿಯನ್ನು ಒಡೆಯಲು ಆಗದೆಯೇ ಹೊರಟುಹೋಗಿದ್ದಾರೆ ಆವತ್ತಿನ ರಾತ್ರಿ ಕ್ರಿಕೆಟ್ ಮ್ಯಾಚ್ ಇತ್ತು ರಾತ್ರಿ 3 ಗಂಟೆಯವರೆಗೆ ಎಲ್ಲರೂ ಬಾಗಿಲು ಹಾಕಿಕೊಂಡು ಕ್ರಿಕೆಟ್ ನೋಡುತ್ತಿರುವ ಸಂದರ್ಭದಲ್ಲಿ ಅವರು ದೇವಸ್ಥಾನಕ್ಕೆ ನುಗ್ಗಿ ಆ ಕಗ್ಗೊಲೆಯನ್ನು ಮಾಡಿ ಅಲ್ಲಿದ್ದ ಹುಂಡಿಯನ್ನು ಒಡೆಯಲು ಆಗದೆಯೇ ವಾಪಸ್ ಹೋಗಿದ್ದಾರೆ ಆದ್ದರಿಂದ ಅಲ್ಲಿಗೆ ಇವತ್ತು ಒಂದು ಪೊಲೀಸ್ ಔಟ್‌ಪೋಸ್ಟ್‌ನ್ನು ಮಾಡಿಕೊಡಬೇಕು ಇವತ್ತಿನ ದಿವಸ ಕಾವಲುಗಾರರು ಯಾರೂ ಬರುವುದಿಲ್ಲ ಅಲ್ಲಿಗೆ ಪೊಲೀಸ್‌ನವರನ್ನು ಹಾಕಿಕೊಡಬೇಕು ಮತ್ತು ಮೃತರ

ಕುಟುಂಬದವರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಸರ್ಕಾರದಿಂದ ಕೊಡಬೇಕೆಂದು ಮನವಿ ಮಾಡಿದ್ದೇನೆ ನಿನ್ನೆ ದಿವಸ ಮುಜರಾಯಿ ಇಲಾಖೆಯ ಸಚಿವರಾದ ನಾಗರಾಜ್ ಶೆಟ್ಟಿಯವರು ಬಂದಿದ್ದರು ಅವರು 50 ಸಾವಿರ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ – ಮಾನ್ಯ ಅಧ್ಯಕ್ಷರೆ, ಅಲ್ಲಿ ಔಟ್ ಪೋಸ್ಟ್ ಪೊಲೀಸ್ ರಾಣೆ ಮಾಡಬೇಕೆಂದು ಪ್ರಸ್ತಾವನೆ ಮಾಡಿದ್ದಾರೆ ಈ ವರ್ಷದ ಆಯವ್ಯಯದಲ್ಲಿ ಇದಕ್ಕಾಗಿ ಎಷ್ಟು ಹಣವಿದೆ ಎಂಬುದು ಪ್ರಾಯಶಃ ಏಪ್ರಿಲ್ ಅಥವಾ ಮೇ ನಲ್ಲಿ ಪೂರ್ಣ ವಿವರ ಸಿಗುತ್ತದೆ ಅದಾದ ಮೇಲೆ ಸಹಾನುಭೂತಿಯಿಂದ ಅವರ ಬೇಡಿಕೆಯನ್ನು ನೆರವೇರಿಸಲು ಪ್ರಯತ್ನ ಮಾಡುತ್ತೇವೆ ಮತ್ತು ಮೃತರ ಕುಟುಂಬದವರಿಗೆ ಪರಿಹಾರವಾಗಿ ಹಣವನ್ನು ಕೊಡಬೇಕೆಂದು ಹೇಳಿದ್ದಾರೆ ಅದಕ್ಕಾಗಿ ಧಾರ್ಮಿಕದತ್ತಿ ಎಂಬ ಇಲಾಖೆ ಇರುವುದರಿಂದ ಈ ವಿಚಾರವನ್ನು ಧಾರ್ಮಿಕದತ್ತಿ ಇಲಾಖೆಯ ಮಾನ್ಯ ಸಚಿವರ ಗಮನಕ್ಕೆ ತಂದು ಸೂಕ್ತ ಪರಿಹಾರವನ್ನು ಒದಗಿಸಲು ಪ್ರಯತ್ನ ಮಾಡುತ್ತೇವೆ

ಅಧ್ಯಕ್ಷರು – ಈಗ ಬಜೆಟ್ ಮೇಲೆ ಚರ್ಚೆ ಮಾನ್ಯ ವಿರೋಧ ಪಕ್ಷದ ನಾಯಕರು

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) – ನಾವು ಯಾರ ಮುಂದೆ ಹೇಳಬೇಕು? ಯಾರು ಬಜೆಟ್ ಮಂಡನೆ ಮಾಡಿದ್ದಾರೆ ಅಂದರೆ ಉಪಮುಖ್ಯಮಂತ್ರಿಯವರಿಲ್ಲ, ಮುಖ್ಯಮಂತ್ರಿಯವರಿಲ್ಲ ಇದೇನಿದು?

ಅಧ್ಯಕ್ಷರು – ದಯಮಾಡಿ, ಮೇಲ್ಮನೆಯಲ್ಲಿ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ನಲ್ಲಿ ಚರ್ಚೆಯಾಗಿದೆ ಉಪಮುಖ್ಯಮಂತ್ರಿಯವರು 5 ನಿಮಿಷದಲ್ಲಿ ಬರುತ್ತಾರೆ

ಶ್ರೀ ಎನ್. ಧರ್ಮಸಿಂಗ್ – ಮೊದಲೇ ಶುರುಮಾಡಿದರೆ ಹೇಗೆ? 5 ನಿಮಿಷದಲ್ಲಿ ಬಾರದಿದ್ದರೆ? ಅವರು ಎಲ್ಲಿದ್ದಾರೆ?

ಅಧ್ಯಕ್ಷರು – ಪಾರ್ಲಿಮೆಂಟರಿ ಸಚಿವರಿದ್ದಾರೆ

ಶ್ರೀ ಎನ್ ಧರ್ಮಸಿಂಗ್ – ಅವರು ಬರಲೇ ಬೇಕು ಅವರು ಬರಲಿ

ಅಧ್ಯಕ್ಷರು – 5 ನಿಮಿಷದಲ್ಲಿ ಬರುತ್ತಾರೆ 5 ನಿಮಿಷದಲ್ಲಿ ಕರೆಸುತ್ತೇನೆ

ಶ್ರೀ ಎನ್ ಧರ್ಮಸಿಂಗ್ – 16ನೇ ತಾರೀಖು ಅವರು ಬಜೆಟ್ ಮಂಡನೆ ಮಾಡಿದರು

ಅಧ್ಯಕ್ಷರು – 5 ನಿಮಿಷದಲ್ಲಿ ಬರುತ್ತಾರೆ ದಯಮಾಡಿ ಆರಂಭ ಮಾಡಿ

ಶ್ರೀ ಕೆ ಶ್ರೀನಿವಾಸಗೌಡ – Finance Minister, Finance Secretary ಇಲ್ಲ ಆದ್ದರಿಂದ ಅವರು ಹೇಗೆ ಮಾತನಾಡುತ್ತಾರೆ?

ಶ್ರೀ ಎಂ ಪಿ ಪ್ರಕಾಶ್ – Finance Secretary ಕಾಂಬೈಯವರಿದ್ದಾರೆ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ – ಮಾನ್ಯ ಪ್ರಕಾಶರವರೇ, ಬಾಕಿ ಸಮಯದಲ್ಲೇ ಯಡಿಯೂರಪ್ಪನವರು ಮುಖ್ಯಮಂತ್ರಿಯವರ ಮಾತನ್ನೇ ಕೇಳುವುದಿಲ್ಲ! ಈಗ Parliamentary Minister ರವರ ಮಾತನ್ನು ಕೇಳುತ್ತಾರೆಯೇ? ಪಾಪ ಅವರು ಬರೆದುಕೊಂಡು ಅವರಿಗೆ ಹೇಳಿದರೂ ಕೇಳುವುದಿಲ್ಲ ಆದ್ದರಿಂದ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಕನಿಷ್ಟ ಪಕ್ಷ ಮುಖ್ಯಮಂತ್ರಿಯವರು, ಉಪಮುಖ್ಯಮಂತ್ರಿಯವರು ಇರಬೇಕು ನಾವು ಈ ರೀತಿ ಎಂದೂ ನೋಡಿಲ್ಲ ಈ ರೀತಿ ಈ ಹೌಸ್‌ನಲ್ಲಿ ಎಂದೂ ಆಗಿಲ್ಲ

ಶ್ರೀ ಎಂ ಪಿ ಪ್ರಕಾಶ್ :– ವಿಧಾನ ಪರಿಷತ್ತಿನ ಸಭಾನಾಯಕರಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೆಲಸ ಮಾಡಿದ್ದಾರೆ (ಗೊಂದಲ) ಪೂರಕ ಅಂದಾಜುಗಳ ವಿಚಾರದಲ್ಲಿ ಪರಿಷತ್ತಿನಲ್ಲಿ ಚರ್ಚೆ ನಡೆದಿದೆ (ಗೊಂದಲ) ಅಲ್ಲಿಂದ ಇಲ್ಲಗೆ ನೇರವಾಗಿ ಬರುತ್ತಾರೆ ತಾವು ಹೇಳಿದ ಮಾತನ್ನು ಒಪ್ಪುತ್ತೇನೆ ವಿರೋಧ ಪಕ್ಷದ ನಾಯಕರು, ಹಿರಿಯ ಸದಸ್ಯರು ಮಾತನಾಡುವಾಗ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಇರಬೇಕಾಗುತ್ತದೆ ಮುಖ್ಯಮಂತ್ರಿಗಳು ಸಭಾಧ್ಯಕ್ಷರಿಗೆ ಈ ಬಗ್ಗೆ ಪತ್ರ ಕೊಟ್ಟಿದ್ದಾರೆ

ಅಧ್ಯಕ್ಷರು – ಉಪ ಮುಖ್ಯಮಂತ್ರಿಗಳು ಬರುವವರೆಗೆ ನಿಮ್ಮದೇನಿದೆ ಕೇಳಿ ಅದೇನು ಪ್ರಸ್ತಾಪ ಮಾಡಿಬಿಡಿ ಅಷ್ಟರೊಳಗೆ ಅವರು ಬರುತ್ತಾರೆ

(ಉ) ಹಂಪಿಯಲ್ಲಿ ನಡೆಯುತ್ತಿರುವ ಭೂಗತ ಚಟುವಟಿಕೆಗಳ ಬಗ್ಗೆ

ಶ್ರೀ ಸಿ ಟಿ ರವಿ (ಚಿಕ್ಕಮಗಳೂರು) – ವಿಶ್ವ ಪರಂಪರೆಯ ಪಟ್ಟಿಯಲ್ಲಿರುವ ಹಂಪಿಯಲ್ಲಿ ನಡೆಯುತ್ತಿರತಕ್ಕಂಥ ಭೂಗತ ಚಟುವಟಿಕೆಗಳು, ಅವ್ಯವಹಾರ, ಮಾದಕ ವಸ್ತುಗಳ ಮಾರಾಟ, ಸಾಗಾಟ ಇತ್ಯಾದಿಗಳ ಬಗ್ಗೆ ನಿನ್ನೆ ಮತ್ತು ಇವತ್ತಿನ ಮುದ್ರಣದಲ್ಲಿ ವಿಜಯಕರ್ನಾಟಕ ಪತ್ರಿಕೆಯು ಒಂದು investigation report ಮಾಡಿದೆ ಈ investigation report ನಮ್ಮನ್ನು ಭಯಭೀತರನ್ನಾಗಿಸುತ್ತದೆ ಮತ್ತು ಒಂದು ಸಂಸ್ಕೃತಿಯ, ಪರಂಪರೆಯ ಹಿನ್ನೆಲೆಯ ತಾಣವಾಗಿರತಕ್ಕಂಥ ಹಂಪಿಯಲ್ಲಿ ನಡೆಯುತ್ತಿರತಕ್ಕಂಥದ್ದು, ಅಲ್ಲಿ ಅಕ್ರಮವಾಗಿ ತಲೆ ಎತ್ತಿರುವಂತಹ ಹೋಟೆಲ್‌ಗಳು, ಅಲ್ಲಿ ಎಲ್ಲ ರೀತಿಯ ಅನೈತಿಕ ಚಟುವಟಿಕೆಗಳು ನಡೆಯುತ್ತಿರತಕ್ಕಂಥದ್ದು, ವಿದೇಶೀಯರ ಮೋಜಿನ ಹೆಸರಿನಲ್ಲಿ ನಡೆಯುತ್ತಿರತಕ್ಕಂತಹ ಅನೈತಿಕ ಚಟುವಟಿಕೆಗಳು ಅವ್ಯಾಹತವಾಗಿ, ಬಹಿರಂಗವಾಗಿ ನಡೆಯುತ್ತಿರತಕ್ಕಂಥ ಮಾದಕ ವಸ್ತುಗಳ ದಂಧೆ ಅದೂ ಸ್ವತಃ ಗೃಹ ಸಚಿವರೇ ಉಸ್ತುವಾರಿ ಸಚಿವರಾಗಿರುವಂಥ ಜಿಲ್ಲೆಯೊಳಗಡೆ, ಅವರ ಮೂಗಿನ ಅಡಿಯಲ್ಲಿ ನಡೆಯುತ್ತಿರತಕ್ಕಂಥ ಈ ರೀತಿಯ ಚಟುವಟಿಕೆಗಳು ನಮ್ಮ ರಾಜ್ಯವನ್ನು ಅಪಾಯಕ್ಕೆ ದೂಡಿದೆ ಮತ್ತು ಐತಿಹಾಸಿಕ ಪರಂಪರೆ ಹೊಂದಿರುವ ಹಂಪಿಯೂ ಕೂಡ ಪ್ರತಿನಿತ್ಯ ಅತಿಕ್ರಮಣಕ್ಕೆ ಒಳಗಾಗುತ್ತಿರತಕ್ಕಂಥದ್ದರ ಬಗ್ಗೆ ಒಂದು ವಿಸ್ತೃತವಾದಂಥ ಲೇಖನ ಇದೆ ಈ ಲೇಖನವನ್ನು ಗೃಹ ಸಚಿವರು ಗಮನಿಸಿದ್ದಾರೆಂದು ನಾನು ಭಾವಿಸಿದ್ದೇನೆ ಹಾಗಾಗಿ, ಈ ಬಗ್ಗೆ ಸರ್ಕಾರ ಯಾವ ರೀತಿ ಇದನ್ನು ತಡೆಯಲಿಕ್ಕೆ ಏನು ಕ್ರಮ ಕೈಗೊಂಡಿದೆ? ಮತ್ತು ಅಲ್ಲಿರತಕ್ಕಂಥ ಅತಿಕ್ರಮಣಗಳನ್ನು ತಡೆಯಲಿಕ್ಕೆ, ಅಕ್ರಮವಾಗಿ ತಲೆ ಎತ್ತಿರತಕ್ಕಂಥ ಹೋಟೆಲ್‌ಗಳನ್ನು ನಿಲ್ಲಿಸಲಿಕ್ಕೆ, ಮೋಜಿನ ಹೆಸರಿನಲ್ಲಿ ನಡೆಯುತ್ತಿರತಕ್ಕಂಥ ಅಶ್ಲೀಲತೆಗಳನ್ನು ತಡೆಗಟ್ಟಲಿಕ್ಕೆ, ಮಾದಕ ವಸ್ತು ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲಿಕ್ಕೆ ಯಾವ ರೀತಿಯ ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) – ಹಂಪಿಯ ಪರಿಸರದಲ್ಲಿ ಈ ತರಹದ ಮಾದಕ ದ್ರವ್ಯಗಳು, ವಿಲಾಸಿ